# ಮಕ್ಕಳಿಗಾಗಿ ಬೈಬಲ್

ಅರ್ಪಿಸುವ

## ಅಬ್ರಹಾಮನಿಗೆ ದೇವರ ವಾಗ್ದಾನ



ಬರಹಗಾರರು: Edward Hughes
ಚಿತ್ರಲೇಖಕರು: Byron Unger; Lazarus
ಅಳವಡಿಸುವವರು: M. Maillot; Tammy S.
ಪದ್ಮಾ ಸ್ಮೈಲೇಸ್: Vinay Shirol
ತಯಾರಕರು: Bible for Children
www.M1914.org

BFC
PO Box 3
Winnipeg, MB R3C 2G1
Canada

©2015 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.



ಜಲಪ್ರಳಯದ ನಂತರ ಭೂಮಿಯ ಮೇಲೆ ಉಳಿದಿರುವ ಜನರು ಒಂದು ಯೋಜನೆಯನ್ನು ಹಾಕಿಕೊಂಡರು.

ತಮ್ಮ ತಮ್ಮೊಳಗೆ, ಬನ್ನಿ ನಾವೆಲ್ಲರು ಒಂದು ದೊಡ್ಡ ಪಟ್ಟಣವನ್ನೂ ಮತ್ತು ಆಕಾಶವನ್ನು ಮುಟ್ಟುವ ಗೋಪುರವನ್ನು ಕಟ್ಟಿ ಇಲ್ಲಿಯೇ ವಾಸಿಸೋಣ ಎಂದುಕೊಂಡರು. ಆಗ ಇವರೆಲ್ಲರು ಒಂದೇ ಭಾಷೆಯನ್ನು ಮಾತಾಡುತ್ತೀದ್ದರು.



ಜನರು ಲೋಕದ ಎಲ್ಲ ಕಡೆಗಳಲ್ಲಿ ಚದರಿ
ಜೀವಿಸಬೇಕೆಂಬುವುದು ದೇವರ ಸಂಕಲ್ಪವಾಗಿತ್ತು. ಆತನು
ಒಂದು ವಿಶೇಷವಾದ ಕಾರ್ಯವನ್ನು ಮಾಡಿದಾಗ ಆ
ಗುಂಪಿನ ಜನರು ಬೇರೆ ಭಾಷೆಯಲ್ಲಿ ಮತನಾಡಿದರು.
ದೇವರು ಅವರಿಗೆ ಹೊಸ ಭಾಷೆಯನ್ನು
ಕೊಟ್ಟನು.



ಯಾರ್ಯಾರು ಒಂದೇ ತರಹದ ಭಾಷೇಯನ್ನು ಮಾತನಾಡಿದರೋ ಅವರೆಲ್ಲರು  ಒಂದೇ ಸ್ಥಳಕ್ಕೆ ಹೋದರು. ಬಹುಶ: ಯಾರಿಗೆ ಅವರವರ ಭಾಷೆ ಅರ್ಥವಾಗಲಿಲ್ಲವ್ರೊ ಅವರು ಹೇದರಿರಬಹುದು. ದೇವರು ಹೀಗೆ ಮಾಡಿದ್ದರಿಂದ ಜನರು ಲೋಕದ  ಎಲ್ಲಾ ಭಾಗದಲ್ಲಿ ಚದರಿದರು. ಆದದರಿಂದ



ಆ ಪಟ್ಟಣವನ್ನು ಬಾಬೆಲ್ ಎಂದು ಕರೆದರು. ಅಂದರೆ ಗಲಿಬಿಲಿ ಎಂದರ್ಥ.

ಅನೇಕ ವರ್ಷಗಳ ನಂತರ, ದೇವರು ಕಲ್ದಿಯರ ಉರ್ ಎಂಬ ಪ್ರದೇಶದಲ್ಲಿ ಅಬ್ರಾಮನಿಗೆ "ನೀನು ಈ ಪ್ರದೇಶವನ್ನು ಬಿಟ್ಟು ನಾನು ತೋರಿಸುವ ದೇಶಕ್ಕೆ ಹೋಗು" ಎಂದು ಆಜ್ಞಾಪಿಸಿದನು.



ದೇವರ ಆಜ್ಞೆಗೆ ಅಬ್ರಹಾಮನು ವಿಧೆಯನಾಗಿ ತನ್ನ ಹೆಂಡತಿ ಸಾರಳ ಮತ್ತು ಸಹೋದರನ ಮಗನಾದ ಲೊಟನ ಸಂಗಡ ಹೊರಟನು.



ಕಾನಾನ್ ದೇಶದಲ್ಲಿ ಅಬ್ರಹಾಮನು ದೊಡ್ಡ ಐಶ್ವರ್ಯವಂತನಾದನು ಆತನಿಗೆ ಅನೇಕ ಹಸು ಕುರಿಗಳಿದ್ದದರಿಂದ ಹುಲ್ಲು ಅವುಗಳಿಗೆ ಸಾಕಾಗಲಿಲ್ಲ.



ಅಬ್ರಾಮನ ದನಕಾಯಿವವರಿಗೂ ಲೋಟನ
ದನಕಾಯಿವವರಿಗೂ ಜಗಳ ಉಂಟಾಯಿತು ಆಗ
ಅಬ್ರಾಮನು "ಲೋಟನಿಗೆ ನಾವು ಜಗಳವಾಡುವದು
ಬೇಡ, ನಾವಿಬ್ಬರು ಪ್ರತ್ಯೇಕವಾಗೋಣ, ನಿನಗೆ ಬೇಕಾದ
ಪ್ರದೇಶವನ್ನು ಆರಿಸಿಕೊ" ಎಂದು ಹೇಳಿದನು.



ಲೋಟನು ಫಲವತ್ತಾಗಿ ನೀರಾವರಿಂದ ಕಾಣಿಸುತ್ತಿದ್ದ ಹಳ್ಳಿ ಪಟ್ಟಣಗಳನ್ನು ಆರಿಸಿಕೊಂಡನು ಆದರೆ ಆ ಪಟ್ಟಣಗಳು ದುಷ್ಟ ಜನರ ವಾಸಸ್ಥಳವಾಗಿದ್ದವು.



ಲೋಟನು ಹೋದ ಮೇಲೆ ದೇವರು ಮತ್ತೆ ಅಬ್ರಾಮನೊಂದಿಗೆ ಮಾತನಾಡಿ "ನಾನು ಕಾನಾನ್ ದೇಶವನ್ನು ನಿನಗೊ ನಿನ್ನ ಸಂತಾನದವರಿಗೂ ಶಾಶ್ವತವಾಗಿ ಕೊಡುವೆನೆಂದನು". ಅಬ್ರಾಮ ಮತ್ತು ಸಾರಯಳಿಗೆ ಮಕ್ಕಳಿರಲಿಲ್ಲ, ಹೀಗಿರುವಾಗ,



ದೇವರು ತನ್ನ ವಾಗ್ದಾನವನ್ನು ಹೇಗೆ ನೇರವೆರಿಸಿದನು?



ಅಬ್ರಾಮ ಮತ್ತು ಸಾರಯಳನ್ನು
ಮೂರು ಪುರುಷರು ಅವರನ್ನು ಸಂದಿಸಿದರು. ಅವರು ಅತಿ ಬೇಗನೆ
ನಿನಗೊಬ್ಬ ಮಗನು ಹುಟ್ಟುವನೆಂದರು ಆಗ ಸಾರಯಳು ನಕ್ಕಳು ಅವಳು
ದೇವರು ವಾಗ್ದಾನವನ್ನು ನಂಬಲಿಲ್ಲ ಏಕೆಂದರೆ ಅವಳಿಗೆ ...



... ತೊಂಬತ್ತು ವರ್ಷವಾಗಿತ್ತು ದೇವರು ಅಬ್ರಾಮನಿಗೆ ಇನ್ನೂ
ಮುಂದೆ ಅಬ್ರಾಮನು (ಸಮೂಹದ) ತಂದೆ ಎಂತಲೂ
ಸಾರಯಳನ್ನು ಸಾರಾ (ರಾಣಿ) ಎಂತಲೂ ಕರೆದನು.



ಅವರು ಅತಿ ಬೇಗನೆ ನಿನಗೊಬ್ಬ ಮಗನು ಹುಟ್ಟುವನೆಂದರು ಆಗ ಸಾರಯಳು ನಕ್ಕಳು ಅವಳು ದೇವರು ವಾಗ್ದಾನವನ್ನು ನಂಬಲಿಲ್ಲ ಏಕೆಂದರೆ ಅವಳಿಗೆ ತೊಂಬತ್ತು ವರ್ಷವಾಗಿತ್ತು ದೇವರು ಅಬ್ರಾಮನಿಗೆ ಇನ್ನೂ ಮುಂದೆ ಅಬ್ರಾಮನು (ಸಮೂಹದ) ತಂದೆ ಎಂತಲೂ

ಸಾರಯಳನ್ನು ಸಾರಾ (ರಾಣಿ) ಎಂತಲೂ ಕರೆದನು.

ದೇವರಿಂದ ಬಂದ ಎಚ್ಚರಿಕೆಯ
ಸಂದೇಶವನ್ನು ಲೋಟನು
ನಂಬಿದನು ಆದರೆ ಆತನ
ಪುತ್ರಿಯರ ಗಂಡಂದಿರು
ಸೋದೋಮಿನಲ್ಲಿ ಉಳಿದರು,
ಎಂಥ ದುರದುಷ್ಟಕರ
(ದುರಂತ) ಅವರು ದೇವರ
ಎಚ್ಚರಿಕೆಯನ್ನು ನಂಬಲಿಲ್ಲ.



ಲೋಟನು ಮತ್ತು ತನ್ನ ಇಬ್ಬರು ಪುತ್ರಿಯರು ಮಾತ್ರ ರಕ್ಷಿಸಲ್ಪಟ್ಟರು, ಅಗ್ನಿಗಂಧಕಗಳು ಪಾಪ ತುಂಬಿದ ಪಟ್ಟಣಗಳ ಮೇಲೆ ಬಿದ್ದವು.



ಲೋಟನ ಹೆಂಡತಿಯು ತಿರುಗಿ
ನೋಡಬೇಡ ಎಂಬ ದೇವರ ಮಾತಿಗೆ
ಅವಿಧೇಯಳಾಗಿ ಹಿಂತಿರುಗಿ
ನೋಡಿದ್ದರಿಂದ ನಾಶವಾಗಿ
ಉಪ್ಪಿನ ಕಂಬವಾದಳು.



ದೇವರು ಅಬ್ರಹಾಮ
ಮತ್ತು ಸಾರಳಿಗೆ
ಮಾಡಿದ ವಾಗ್ದಾನದಂತೆ
ಮುಪ್ಪಿನಕಾಲದಲ್ಲಿ
ಒಂದು ಮಗುವನ್ನು
ದಯಪಾಲಿಸಿದನು.
ಇಸಾಕನ ಜನನದಿಂದ
ಇಬ್ಬರು
ಸಂತೋಷಿಸಿದರು.



ಅಬ್ರಹಾಮನು ಸಹ ಒಂದು
ವೇಳೆ ಕಾನಾನ್ ದೇಶವನ್ನು
ತನಗೂ ತನ್ನ ಸಂತತಿಯವರಿಗೂ
ಶಾಶ್ವತವಾಗಿ ದೇವರು
ಕೋಡುವನೆಂದು ನೆನೆಸಿರಬಹುದು.
ದೇವರು ಮಾಡಿದ ಆ
ವಾಗ್ದಾನವನ್ನು ನೆರವೇರಿಸುವವನು



ಯಾಕೆಂದರೆ
ಆತನು

ಮಾಡಿದ ಎಲ್ಲಾ
ವಾಗ್ದಾನವನ್ನು ನೆರವೇರಿಸುತ್ತಾನೆ.

# ಅಬ್ರಹಾಮನಿಗೆ ದೇವರ ವಾಗ್ದಾನ

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

**ಉಜಟಿಜ್ಞು 11 ಣಂ 21**

**“ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು.”**
**ಕೀರ್ತನೆ 119:130**

# ಮುಕ್ತಾಯ

4

60

ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.

ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.

ನೀನು ಈ ಸತ್ಯವನ್ನು ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:
ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ ಮತ್ತು ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು. ಆಮೆನ್.

ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು!
ಯೋಹಾನ 3:16